# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **294** |
| 2 | ಸದಸ್ಯರ ಹೆಸರು | ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ.<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 15.12.2021 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿರುವ ಫುಟ್‌ಬಾಲ್ ಹಾಗೂ ಬಾಸ್ಕೇಟ್‌ಬಾಲ್ ಅಂಕಣಗಳು ಕ್ರೀಡಾ ಇಲಾಖೆಯ ಸುಪರ್ದಿಯಲ್ಲಿರದೇ, ಅದು ಶಿಕ್ಷಣ ಇಲಾಖೆಯ ಸುಪರ್ದಿಯಲ್ಲಿದ್ದ ಕಾರಣ ಅದರ ದುರಸ್ತಿ ಕಾರ್ಯಗಳನ್ನು ಮಾಡಲು ಸಾಧ್ಯವಾಗದ ಕಾರಣ ದಿನಾಂಕ: 30.03.2021 ರಲ್ಲಿ ಕ್ರೀಡಾಂಗಣ ಸಮಿತಿ ಸಭೆಯಲ್ಲಿ ಈ ಜಿಲ್ಲಾ ಕ್ರೀಡಾಂಗಣವನ್ನು ಸರ್ವೆ ಮಾಡಲು ತೀರ್ಮಾನಿಸಿ ಕಂದಾಯ ಇಲಾಖೆಗೆ ಹಸ್ತಾಂತರಿಸುವ ಈ ಸರ್ವೆ ಪ್ರಕ್ರಿಯೆಯ ಪ್ರಗತಿಯು ಯಾವ ಹಂತದಲ್ಲಿದೆ; (ವಿವರ ನೀಡುವುದು) | ದಿನಾಂಕ: 30.03.2021 ರಲ್ಲಿ ಕ್ರೀಡಾಂಗಣ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ ಉಪ ವಿಭಾಗಾಧಿಕಾರಿ, ಮಡಿಕೇರಿ ಹಾಗೂ ಉಪ ನಿರ್ದೇಶಕರು, ಭೂಮಾಪನ ಇಲಾಖೆ, ಮಡಿಕೇರಿ ಇವರೊಂದಿಗೆ ಚರ್ಚಿಸಿ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣಕ್ಕೆ ಗಡಿ ರೇಖೆ (ಬೌಂಡ್ರಿ ಲೈನ್) ನಿಗದಿಪಡಿಸಲು ಸರ್ವೆ ಮಾಡಲಾಗಿರುತ್ತದೆ. |
| ಆ) | ಈ ಜಿಲ್ಲಾ ಕ್ರೀಡಾಂಗಣದ ಸರ್ವೆ ಕಾರ್ಯ ಮಾಡಿ ಮುಗಿಸಿ, ಕ್ರೀಡಾ ಇಲಾಖೆಯ ಸುಪರ್ದಿಗೆ ಯಾವ ಕಾಲಮಿತಿಯಲ್ಲಿ ನೀಡಲಾಗುವುದು; (ವಿವರ ನೀಡುವುದು) | ಮಡಿಕೇರಿಯ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದ ಕೆಳಕಂಡ ಸರ್ವೆ ನಂಬರ್‌ನಲ್ಲಿರುವ ಜಾಗವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಸರಿನಲ್ಲಿರುತ್ತದೆ.<br><br>ಕ್ರ.ಸಂ. \| ಕ್ರೀಡಾಂಗಣದ ವಿವರ \| ಸ.ನಂ. \| ಜಾಗದ ವಿಸ್ತೀರ್ಣ<br>1 \| ಜನರಲ್ ತಿಮ್ಮಯ್ಯ ಕ್ರೀಡಾಂಗಣ ಮಡಿಕೇರಿ \| 307 \| 4.27 ಎಕರೆ<br>2 \| ಜಿಲ್ಲಾ ಒಳಾಂಗಣ ಕ್ರೀಡಾಂಗಣ ಮಡಿಕೇರಿ \| 308 \| 0.80 ಎಕರೆ<br><br>ಸ.ನಂ.308 ರಲ್ಲಿ 5.57 ಎಕರೆ ಜಾಗವು ಸರ್ಕಾರದ ಹೆಸರಿನಲ್ಲಿದ್ದು, ಸದರಿ ಸರ್ವೆ ನಂಬರ್‌ನಲ್ಲಿ 3.00 ಎಕರೆ ಜಾಗವನ್ನು ಜನರಲ್ ತಿಮ್ಮಯ್ಯ ಫುಟ್‌ಬಾಲ್ ಮೈದಾನಕ್ಕಾಗಿ ಮೀಸಲಿರಿಸಲು ಸರ್ವೆ ಕಾರ್ಯ ಮುಗಿದಿದ್ದು, ಬೌಂಡ್ರಿಲೈನ್ |

Nested table from answer ಆ):

| ಕ್ರ.ಸಂ. | ಕ್ರೀಡಾಂಗಣದ ವಿವರ | ಸ.ನಂ. | ಜಾಗದ ವಿಸ್ತೀರ್ಣ |
|---|---|---|---|
| 1 | ಜನರಲ್ ತಿಮ್ಮಯ್ಯ ಕ್ರೀಡಾಂಗಣ ಮಡಿಕೇರಿ | 307 | 4.27 ಎಕರೆ |
| 2 | ಜಿಲ್ಲಾ ಒಳಾಂಗಣ ಕ್ರೀಡಾಂಗಣ ಮಡಿಕೇರಿ | 308 | 0.80 ಎಕರೆ |

| | | |
|---|---|---|
| | | ನಿಗದಿಪಡಿಸಲಾಗಿರುತ್ತದೆ. ಆರ್.ಟಿ.ಸಿ.ಯಲ್ಲಿ ಖಾತೆ ಬದಲಾವಣೆಯಾಗಬೇಕಾಗಿರುತ್ತದೆ.<br>3 \| ಜನರಲ್ ತಿಮ್ಮಯ್ಯ ಫುಟ್ ಬಾಲ್ ಮೈದಾನ, ಮಡಿಕೇರಿ \| 308 \| 3.00 ಎಕರೆ |
| ಇ) | ಈ ಕ್ರೀಡಾಂಗಣಕ್ಕೆ ಗಡಿ ರೇಖೆಯನ್ನು ಹಾಕಲಾಗಿದೆಯೇ, ಹಾಗಿದ್ದಲ್ಲಿ ವಿವರ ನೀಡುವುದು? | ಮಡಿಕೇರಿ ಜನಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣಕ್ಕೆ ಗಡಿ ರೇಖೆಯನ್ನು ಹಾಕಲಾಗಿದೆ. |

<u>ಸಂಖ್ಯೆ: ಕಂಇ 202 ಎಸ್ಎಸ್ಸಿ 2021</u>

**(ಆರ್.ಅಶೋಕ)**

ಕಂದಾಯ ಸಚಿವರು